8 ಮಂಗಳೂರು ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೋಬಾಲ್ಟ್ ಪ್ಲಾಂಟ್ ಇಲ್ಲದಿರುವುದು.

ಶ್ರೀ ಬ್ಲೇಸಿಯಸ್ ಎ. ಡಿಸೋಜ —ಮಂಗಳೂರಿನ ಜಿಲ್ಲಾ ಹೆಡ್‌ಕ್ವಾರ್ಟರ್ಸ್ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೋಬಾಲ್ಟ್ ಪ್ಲಾಂಟ್ ಇಲ್ಲದೆ ಇರುವುದರಿಂದ ಕ್ಯಾನ್ಸರಿಗೆ ತುತ್ತಾದ ಬಹಳ ಮಂದಿ ಬಡ ರೋಗಿಗಳು ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲಿದ್ದು ನರಳುತ್ತಿದ್ದಾರೆ. ಕಳೆದ ವರ್ಷದ ಆಯವ್ಯಯದಲ್ಲಿ ಸದರಿ ಕೋಬಾಲ್ಟ್ ಪ್ಲಾಂಟ್ ಹಾಕುವ ಬಗ್ಗೆ ಅವಕಾಶವನ್ನು ಕಲ್ಪಿಸಿದ್ದಾರ್ಗೂ ಅದನ್ನು ಕಾರ್ಯಗತಗೊಳಿಸಿಲ್ಲ. ಆದ್ದರಿಂದ ಈ ಸಾರಿಯಾದರೂ ಮೇಲ್ಕಂಡ ಆಸ್ಪತ್ರೆಯಲ್ಲಿ ಕೋಬಾಲ್ಟ್ ಪ್ಲಾಂಟ್ ಹಾಕಿಸಿ ಬಡರೋಗಿಗಳ ಕಷ್ಟವನ್ನು ಪರಿಹರಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು). – ಮಂಗಳೂರಿನಲ್ಲಿರುವ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೋಬಾಲ್ಟ್ ಚಿಕಿತ್ಸಾ ಸೌಲಭ್ಯ ಇಲ್ಲದಿರುವುದರಿಂದ ಈಗ ಈ ಆಸ್ಪತ್ರೆಗೆ ಹಾಜರಾಗುವ ಕ್ಯಾನ್ಸರ್ ರೋಗಿಗಳನ್ನು ಚಿಕಿತ್ಸಾ ಸೌಲಭ್ಯದ ಸಲುವಾಗಿ ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಮತ್ತು ಕಿದ್ವಾಯಿ ಆಸ್ಪತ್ರೆಗಳಿಗೆ ಕಳುಹಿಸಿ ಚಿಕಿತ್ಸಾ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ. ವೆನ್‌ಲಾಕ್ ಆಸ್ಪತ್ರೆಯಲ್ಲಿಯೂ ಸಹ ಈ ಸೌಲಭ್ಯವನ್ನು ಒದಗಿಸಬೇಕೆಂದು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅದಕ್ಕಾಗಿ ಕಟ್ಟಡವನ್ನು ನಿರ್ಮಿಸಬೇಕಾಗಿದೆ ಕಟ್ಟಡ ನಿರ್ಮಿಸಲು ಸುಮಾರು ೮೫ ಲಕ್ಷ ರೂಪಾಯಿಗಳ ಅಂದಾಜನ್ನು ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್, ಪಿಡಬ್ಲ್ಯೂಡಿ ಮಂಗಳೂರು ಅವರು ತಯಾರಿಸಿರುವರು. ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು ಕಟ್ಟಡ ಕಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವಸಂತ ವಿ. ಸಾಲಿಯಾನ (ಶಾಸಕರು ಗೈರುಹಾಜರು).—

9 ಉಳ್ಳಾಲದಲ್ಲಿ ಮೊಹಿದ್ದೀನ್ ಕುನ್ನಿಯವರ ಮನೆಗೆ ನುಗ್ಗಿ ಗಲಾಟೆ ಮಾಡಿರುವುದು

ಶ್ರೀ ಬಿ. ಎಂ. ಇದಿನಬ್ಬ —ನಾನು ವಾಸವಾಗಿರುವ ಉಳ್ಳಾಲದಲ್ಲಿ ೨೬-೩-೮೮ರಂದು ರಾತ್ರಿ ಶ್ರೀ ಮೊಹಿದ್ದೀನ್ ಕುನ್ನಿ ಎಂಬ ವಿನಾಯ ವ್ಯಾಪಾರಿಗಳ ಮನೆಗೆ ಕೆಲವು ಪುಂಡರು ನುಗ್ಗಿ ಕಿಟಕಿ ಗಳನ್ನು ಜಖಂಗೊಳಿಸಿ. ಕನ್ನಡಿಗಳನ್ನೆಲ್ಲಾ ಪುಡಿಮಾಡಿ ಬಾಗಿಲನ್ನು ಬಡಿದು ವಿಪರೀತ ಗಲಾಟೆ ಮಾಡಿರುವುದಲ್ಲದೆ ಹೊರಗಿಟ್ಟ ಅವರ ಕಾರನ್ನು ಬಡಿದು ಜಖಂಗೊಳಿಸಿರುವ ವಿಚಾರ ಇದೀಗ ನನಗೆ ತಂತಿ ಮತ್ತು ಫೋನ್ ಮೂಲಕ ತಿಳಿದಿರುತ್ತದೆ. ನಡುರಾತ್ರಿ ಪುಂಡಾಟಿಕೆಗಾಗಿಯೇ ಬಂದ ಕಾರಣ ಮೊಹಿದ್ದೀನ್ ಕುನ್ನಿ ಮನೆಯವರೂ ಸುತ್ತಮುತ್ತಲಿನ ಮನೆಗಳವರೂ ಭಯಭೀತರಾಗಿ ರುತ್ತಾರೆ. ಉಳ್ಳಾಲ ಪೋಲೀಸು ಸ್ಟೇಷನ್ನಿಗೆ ದೂರು ಕೊಟ್ಟರೂ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಇದು ಮೇಲಿನ ಅಧಿಕಾರಿಗಳಿಗೆ ಗೊತ್ತಾಗಿ ೨೭-೩-೮೮ರಂದು ಸಂಜೆ ಶಾಂತಿ ಸಮಿತಿ ಸಭೆಯನ್ನು ಇಟ್ಟುಕೊಂಡಿದ್ದಾರೆಂದು ತಿಳಿದಿದೆ. ಇಲ್ಲಿ ಹಿಂದೊಮ್ಮೆ ಕೋಮು ಗಲಭೆ ಆಗಿರುವ ಕಾರಣ ತುಂಬಾ ಭಯವಿದೆ. ಆದಕಾರಣ ಪೋಲೀಸು ಅಧಿಕಾರಿಗಳು ಶೀಘ್ರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ ಈ ಕುರಿತು ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—ಮಂಗಳೂರಿನ ಬಳಿ ಉಳ್ಳಾಲ ಪಟ್ಟಣದಲ್ಲಿ ರುವ ಸೈಯದ್ ಮದಾನಿ ದರ್ಗದಲ್ಲಿ ರಂಜಾನ್ ಪ್ರಯುಕ್ತ ' ಮತ ಪ್ರಸಂಗ ' ಎನ್ನುವ ವಿಚಾರಗೋಷ್ಠಿ ರಾತ್ರಿಯಿಂದ ಮಧ್ಯರಾತ್ರಿಯವರೆಗೆ ನಡೆಯುತ್ತಿತ್ತು, ಇದು ದಿನಾಂಕ ೨೬-೩-೮೮ರಂದು ಮುಕ್ತಾಯ ಗೊಳ್ಳುವುದಿತ್ತು.

ಶ್ರೀ ದರ್ಗದ ಎದುರುಗಡೆ ಬೆಲಚಡ ಜನಾಂಗಕ್ಕೆ ಸೇರಿದ ಭಗವತಿ ದೇವಸ್ಥಾನದ ವಾರ್ಷಿಕ ಜಾತ್ರೆ ೨೬-೩-೮೮ರಂದು ನಡೆಯಿತು. ಈ ಜಾತ್ರೆಯಲ್ಲಿ ಭಕ್ತಾದಿಗಳು ಹಿಂದಿರುಗುವಾಗ ಕೋಳಿ ರೆಕ್ಕೆ ಪುಕ್ಕಗಳನ್ನು ಚೆಲ್ಲುತ್ತಾ ಹೊರಟಿದ್ದರು. ದೇವಸ್ಥಾನದ ಬಳಿ ಇರುವ ಮೊಹಿದ್ದೀನ್ ಕುನ್ನಿ

ಎನ್ನುವರು ಈ ಬಗ್ಗೆ ರಾತ್ರಿ ೧೧-೩೦ ಗಂಟೆ ಸಮಯದಲ್ಲಿ ಫಿರ್ಯಾದಿ ಕೊಟ್ಟಿದ್ದು, ಮ್ಯಾನೇಜಿಂಗ್ ಟ್ರಸ್ಟಿನವರು ಧ್ವನಿವರ್ಧಕ ಯಂತ್ರದ ಮೂಲಕ ಪಾಗೆ ಮಾಡಬಾರದೆಂದು ಭಕ್ತಾದಿಗಳಲ್ಲಿ ವಿನಂತಿಸಿ ಕೊಂಡರು.

ದಿನಾಂಕ ೨೭-೩-೮೮ರಂದು ಬೆಳಿಗ್ಗೆ ಸುಮಾರು ೩ ಗಂಟೆಗೆ, ಜಾತ್ರೆಯಲ್ಲಿ ಪಟಾಕಿ ಸಿಡಿಸಿದ ಸಮಯದಲ್ಲಿ ಯಾರೋ ದುರಾತ್ಮರು ಮೊಹಿದ್ದೀನ್ ಕುನ್ನಿ ಎನ್ನುವರ ಮನೆಯ ಆವರಣದೊಳಗೆ ನುಗ್ಗಿ ಕಿಟಕಿಗಳ ಮತ್ತು ಕಾರಿನ ಗಾಜುಗಳನ್ನು ಒಡೆದು ಹಾಕಿ ಸುಮಾರು ೭೦೦ ರೂಪಾಯಿಗಳಷ್ಟು ನಷ್ಟವನ್ನುಂಟು ಮಾಡಿರುತ್ತಾರೆ. ಈ ಸಂಬಂಧದ ಉಲ್ಲಾಳ ಠಾಣೆಯಲ್ಲಿ ಕೇಸು ದಾಖಲು ಮಾಡಿಕೊಳ್ಳಲಾಗಿದೆ. ಅನಂತರ ಪೋಲೀಸರು ಬಿಡಿ ವ್ಯವಸ್ಥೆ ಮಾಡಿದರು. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರು ಎರಡು ಕೋಮಿನ ಮುಖಂಡರುಗಳನ್ನು ಬರಮಾಡಿಕೊಂಡು ಯಾವ ಗಲಭೆಗಳಿಗೂ ಎಡೆಕೊಡದಂತೆ ಎಚ್ಚರಿಕೆ ನೀಡಿದ್ದರಿಂದ ಆ ದಿನ ಯಾವ ಅಹಿತಕರ ಘಟನೆಗಳೂ ಸಂಭವಿಸಲಿಲ್ಲ. ಉಲ್ಲಾಳ ಪಟ್ಟಣದ ಕೆಲವು ಮುತೀಯ ಗೂಂಡಾಗಳನ್ನು ಹಿಡಿದು ವಿಚಾರಿಸಲಾಯಿತು. ಇನ್ನೂ ಯಾವ ಸುಳಿವು ಸಿಕ್ಕಿರುವುದಿಲ್ಲ, ಮೊಹಿದ್ದೀನ್ ಕುನ್ನಿ ಅವರ ಮನೆಯ ಮೇಲೆ ಹಲ್ಲೆ ಮಾಡಿದ ದುರಾತ್ಮರನ್ನು ಹಿಡಿಯುವ ಪ್ರಯತ್ನ ಮುಂದುವರೆದಿದೆ.

ಉಲ್ಲಾಳದಲ್ಲಿ ಆಗಾಗ್ಗೆ ಕೋಮು ಪ್ರಚೋದಿತ ಸಣ್ಣಪುಟ್ಟ ಘಟನೆಗಳು ನಡೆಯುತ್ತಿದ್ದು ಸ್ಥಳೀಯ ಪೋಲೀಸರು ಸಕಾಲಿಕ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಪರಿಸ್ಥಿತಿ ಹತೋಟಿಯಲ್ಲಿದೆ.

10 ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಎ. ನಾಗತಿಹಳ್ಳಿಯಲ್ಲಿ ನಿರಂತರವಾಗಿ ನಡೆಯುತ್ತಿರುವ ಗಲಭೆಗಳು

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಎ. ನಾಗತಿಹಳ್ಳಿ ಗ್ರಾಮದಲ್ಲಿ ನಿರಂತರವಾಗಿ ನಡೆಯುತ್ತಿರುವ ಗಲಭೆಗಳ ಬಗ್ಗೆ.

ಮೇಲ್ಕಂಡ ಎ. ನಾಗತಿಹಳ್ಳಿ ಗ್ರಾಮದಲ್ಲಿ ಮೀನಾಕ್ಷಮ್ಮ ಎಂಬ ವಕ್ಕಲಿಗ ಜನಾಂಗಕ್ಕೆ ಸೇರಿದ ಸುಮಾರು ೩೮ ವರ್ಷದ ವಿಧವೆಗೂ ಅದೇ ಗ್ರಾಮದ ರಾಜೇಗೌಡ ಎಂಬುವವರಿಗೂ ಜಮೀನಿನ ಸಂಬಂಧವಾಗಿ ಈ ಹಿಂದಿನಿಂದಲೂ ವ್ಯಾಜ್ಯ ಇದೆ, ಈ ಜಮೀನು ಮೀನಾಕ್ಷಮ್ಮನವರ ಅಣ್ಣ ಪರಮೇಶ್ವರ್ ಎಂಬ ನಿವೃತ್ತ ಯೋಧರಿಗೆ ನಾಗತಿಹಳ್ಳಿ ಸರ್ವೆ ನಂ. ೬೩ರಲ್ಲಿ ೩ ಎಕರೆಗಾಗಿ ಮಂಜೂರಾತಿಯಾಗಲು ನಡವಳಿಕೆಗಳು ನಡೆಯುತ್ತಿವೆ. ಈ ಸಂಬಂಧವಾಗಿ ಮೀನಾಕ್ಷಮ್ಮ ಜಮೀನಿನ ಸ್ಥಳ ಮಹಜರು ನಡೆಸಲು ತಾಲ್ಲೂಕು ಕಛೇರಿಗೆ ಓಡಾಡಿ ಸ್ಥಳ ಮಹಜರು ನಡೆಸಿದ ಕಾರಣಕ್ಕಾಗಿ ಸದರಿ ರಾಜೇಗೌಡ ಕೆಲವು ಪುಂಡು ಪೋಕರುಗಳನ್ನು ಎತ್ತಿಕಟ್ಟಿ ಮೀನಾಕ್ಷಮ್ಮನವರ ಮಗಳು ಉಮಾವತಿ (ಸುಮಾರು ೧೮ ವರ್ಷ ವಯಸ್ಸು) ಯ ಮೇಲೆ ದಿನಾಂಕ ೮-೧೨-೮೭ರಂದು ಅತ್ಯಾಚಾರ ಮಾಡಲು ಪ್ರಯತ್ನಿಸಿ ಅವರ ಮನೆಯ ಹೆಂಚನ್ನು ಇಳಿಸಿರುತ್ತಾರೆ. ೮-೧೨-೮೭ರಂದು ಉಮಾವತಿಯು ತಂದೆತಾಯಿಗಳು ಮನೆಯಲ್ಲಿರಲಿಲ್ಲ. ಈ ಸಂಬಂಧವಾಗಿ ಪೋಲೀಸ್ ಠಾಣೆಗೆ ದೂರು ನೀಡಲಾಗಿದೆ.

ಈ ದೂರಿನ ಸಂಬಂಧವಾಗಿ ಅದೇ ಗ್ರಾಮದ ನಂಜಪ್ಪಗೌಡ ಗೋವಿಂದೇಗೌಡ ಎಂಬುವವರು ಮೀನಾಕ್ಷಮ್ಮನವರಿಗೆ ಬೆಂಬಲ ನೀಡಿದ ಕಾರಣಕ್ಕಾಗಿ ಮತ್ತು ಮೀನಾಕ್ಷಮ್ಮನವರ ಪರ ಸಾಕ್ಷಿ ಹೇಳಿದ್ದಕ್ಕಾಗಿ ರಾಜೇಗೌಡ ಮತ್ತು ಮಾಯಣ್ಣಗೌಡರಿಬ್ಬರೂ ಸೇರಿ ಕೆಲವು ಪುಂಡು ಪೋಕರುಗಳನ್ನು ಹುರಿದುಂಬಿಸಿ ಮೀನಾಕ್ಷಮ್ಮ ಗೋವಿಂದೇಗೌಡ ಮತ್ತು ನಂಜಪ್ಪಗೌಡರ ಮೇಲೆ ದೌರ್ಜನ್ಯ ನಡೆಸಲು ಪ್ರೇರೇಪಿಸಿದರು. ದಿನಾಂಕ ೧೧-೧೨-೮೭ರಂದು ಮೀನಾಕ್ಷಮ್ಮನವರ ಮನೆಯನ್ನು ಲೂಟಿ ಮಾಡಿ ಸುಮಾರು ೩೦ ಸಾವಿರ ರೂಗಳಷ್ಟು ಪೌಲ್ಯದ ತೆಂಗಿನಕಾಯಿ, ಒಡವೆ ವಸ್ತ್ರ, ಪಾತ್ರೆ ಇತ್ಯಾದಿಗಳನ್ನು ದರೋಡೆ ಮಾಡಿದರು. ಆಗಲೂ ಸಹ ಪೋಲೀಸರಿಗೆ ದೂರು ನೀಡಲಾಗಿದೆ, ಅನಂತರ ಮೀನಾಕ್ಷಮ್ಮನವರ ಸಂಸಾರಕ್ಕೆ ಕೊಲೆ ಬೆದರಿಕೆ ಹಾಕಿ ಅವರನ್ನು ಊರು ಬಿಡಿಸಲಾಯಿತು. ಮಂಡ್ಯ ಜಿಲ್ಲಾ ದಲಿತ ಸಂಘರ್ಷ ಸಮಿತಿಯು ಈ ಕೇಸನ್ನು ಕೈಗೆತ್ತಿಕೊಂಡು ಮೀನಾಕ್ಷಮ್ಮನವರ ಸಂಸಾರ ರಕ್ಷಣೆ ಮತ್ತು ನ್ಯಾಯ ಒದಗಿಸಲು ಮಂಡ್ಯದ ಎಸ್, ಪಿ. ಯವರನ್ನು ಒತ್ತಾಯಿಸಿತು.